ನನ್ನ ಮತ್ತು ನೀನಾಳ ಸಂಬಂಧ ಅವಳ ತಂದೆ–ತಾಯಿಯ ಒಪ್ಪಿಗೆ ಅಥವಾ ತಿರಸ್ಕಾರವನ್ನು ಸುತಾರಾಂ ಅವಲಂಬಿಸುತ್ತಿರಲಿಲ್ಲ. ಆದರೂ ಪ್ರೇಯಸಿಯ ತಂದೆ ತಾಯಿಯನ್ನು ಮೊದಲ ಬಾರಿಗೆ ಭೇಟಿಯಾಗುವುದು ಒಂದು ರೀತಿಯ ಮಾನಸಿಕ ಒತ್ತಡಕ್ಕೆ ಕಾರಣವಾಗುತ್ತದೆ. ನನ್ನ ಮನಸ್ಸಿನಲ್ಲಿ ಕೋಲಾಹಲ ಹಬ್ಬಿತ್ತು. ವಿಶೇಷವಾಗಿ ಪ್ರೇಯಸಿಯ ಸಂಸ್ಕಾರ ಪ್ರತ್ಯೇಕವಾಗಿದ್ದು, ಅವಳ ತಂದೆ ತಾಯಿ ಪಾರಂಪರಿಕ ವಿಚಾರಧಾರೆಯವರಾಗಿದ್ದರೆ ಪರಿವಾರದವರ ತಿರಸ್ಕಾರ, ಸಂಬಂಧಗಳ ಬಗ್ಗೆ ಜಬರದಸ್ತಿನ ಒತ್ತಡ ಬೀರಬಲ್ಲದು. ನೀನಾಳೊಂದಿಗೆ ಇದುವರೆಗೆ ಚರ್ಚಿಸದ ಅಭಿಪ್ರಾಯಗಳು ನೀನಾಳ ತಂದೆ ತಾಯಿಯ ಭೇಟಿಯಿಂದಾಗಿ ಮುನ್ನೆಲೆಗೆ ಬಂದರೆ ಎಂಬ ಭಯವೂ ಇತ್ತು.

ಸಣ್ಣಗೆ ಮಳೆ ಬರುತ್ತಿತ್ತು. ರಸ್ತೆಗಳು, ಕಟ್ಟಡಗಳು, ಮರಗಿಡಗಳು ಒದ್ದೆಯಾಗಿದ್ದವು. ಮಳೆ ಗಾಳಿಯಲ್ಲಿ ಇನ್ನಷ್ಟು ತಾಜಾತನವನ್ನು ತುಂಬಿತ್ತು. ಒಂದು ಭವ್ಯ ಬಂಗಲೆ ಎದುರು ನೀನಾ ಕಾರನ್ನು ನಿಲ್ಲಿಸಿದಳು. ಕಾರಿನಿಂದ ಇಳಿದ ನಾನು ಕೆಲವು ಕ್ಷಣ ಆ ಭವ್ಯ ಬಂಗಲೆಯನ್ನೇ ನೋಡುತ್ತಾ ನಿಂತೆ.

ನೇಮ್‌ಪ್ಲೇಟಿನಲ್ಲಿ 'ಡಾ. ರಾಮಚಂದ್ರ ಶ್ರೀನಿವಾಸನ್ ಮತ್ತು ಶೀಲಾ ದೇವಿ ಶ್ರೀನಿವಾಸನ್; 12 ಹರಲೇವ್' ಎಂದಿತ್ತು.

ಗೇಟಿನ ಎರಡೂ ಬದಿಗಳಲ್ಲಿ ನಿಂತಿದ್ದ ದಾರು ಮರಗಳು ಇಬ್ಬರು ದ್ವಾರಪಾಲಕರಂತೆ ತೋರುತ್ತಿದ್ದವು. ದೊಡ್ಡ ದೊಡ್ಡ ಕುಂಡಗಳಲ್ಲಿ ನಾನಾ ತರಹದ ಗಿಡಗಳು ತೂಗಾಡುತ್ತಿದ್ದವು. ನೀನಾಳ ಮನೆ ಅಂದವಾಗಿತ್ತು. ಆದರೆ ಅವಳ ತಂದೆ–ತಾಯಿಯ ಮನೆ ತುಂಬಾ ಭವ್ಯವಾಗಿತ್ತು. ಖಂಡಿತವಾಗಿ ನೀನಾಳ ತಂದೆ–ತಾಯಿ ತುಂಬಾ ಶ್ರೀಮಂತರಾಗಿದ್ದರು. ಅವರದೇ ಆದ ಬಿಜಿನೆಸ್ ಇದ್ದು, ಭಾರತೀಯರಂತೆ ಉಳಿತಾಯ ಮಾಡುವುದನ್ನು ಸಹ ತಿಳಿದಿದ್ದರು.

ನೀನಾಳ ತಂದೆ–ತಾಯಿ 1966ರಲ್ಲಿ ಭಾರತದಿಂದ ಡೆನ್ಮಾರ್ಕ್‌ಗೆ ಬಂದು ನೆಲೆಸಿದ್ದರು. ಅವಳ ತಂದೆ ಡಾ. ರಾಮಚಂದ್ರ ಶ್ರೀನಿವಾಸನ್ ಕೋಪನ್‌ಹೇಗನ್ ಯೂನಿವರ್ಸಿಟಿಯಲ್ಲಿ ಗಣಿತದ ಪ್ರೊಫೆಸರ್ ಆಗಿದ್ದು, ತಾಯಿ ಶೀಲಾ ದೇವಿಯವರು ಸಹ ಇಂಡಿಯನ್ ಗಾರ್ನಮೆಂಟ್ ಮತ್ತು ಜ್ಯುವೆಲ್ಲರಿ ವ್ಯಾಪಾರವನ್ನು ಆರಂಭಿಸಿದ್ದರು. ಶೀಲಾ ದೇವಿಯವರು ಮೊದಲು ಒಂದು ಬೊಟೀಕ್ ತೆರೆದಿದ್ದರು, ನಂತರ ಅದು ವಾಲ್ಕಿಂಗ್ ಸ್ಟ್ರೀಟ್‌ನ ಒಂದು ಉತ್ತಮ ಸ್ಥಳದಲ್ಲಿ ಒಂದು ವಿಶಾಲವಾದ ಶೋರೂಮ್ ಆಗಿ ಬದಲಾಗಿತ್ತು. ರಾಮಚಂದ್ರರು ಸಹ ತಮ್ಮ ಪತ್ನಿಗೆ ಸಹಾಯವನ್ನು ಮಾಡುತ್ತಿದ್ದರು; ತಮ್ಮ ನಿವೃತ್ತಿಯ ನಂತರ ಅವರು ಪೂರ್ಣವಾಗಿ ಪತ್ನಿಯೊಂದಿಗೆ ವ್ಯಾಪಾರದಲ್ಲಿ ತೊಡಗಿಕೊಂಡಿದ್ದರು.

ಮಾನ್ಸೂನ್ ಶೋರೂಮ್ ಇಂದು ಸಹ ವಾಕಿಂಗ್ ಸ್ಟ್ರೀಟ್‌ನಲ್ಲಿ ನಿಂತಿದೆ. ಆದರೆ ಇಂದು ಅದರ ಮಾಲೀಕ ಬದಲಾಗಿದ್ದಾನೆ.

(ಸಶೇಷ)

## ಪ್ರತಿಕ್ರಿಯೆ




### ಮಂಗಳಮುಖಿಯರನ್ನು ಗೌರವಿಸೋಣ

'ಹೊಸ ಬೆಳಗು' (ಲೇ: ಎನ್ ಶೈಲಜಾ ಹಾಸನ, ಕಲೆ: ಎಚ್‌ಎಸ್ ಮೋಣಪ್ಪ) ಧಾರಾವಾಹಿ ಚೆನ್ನಾಗಿ ಮೂಡಿಬಂದಿದೆ. ಇಷ್ಟು ಬೇಗ ಮುಗಿಯುತ್ತದೆ ಎಂದು ಭಾವಿಸಿಕೊಂಡಿರಲಿಲ್ಲ. ವೀರೇಶನ (ವರ್ಷಳ) ಕಥೆ ಓದುತ್ತಿರುವಾಗ ಸಂಕಟ, ದುಗುಡ ಮನೆ ಮಾಡುತಿತ್ತು. ಹೆತ್ತವರಿಗೆ ಅಂಗವಿಕಲ ಮಕ್ಕಳನ್ನು ಒಪ್ಪಿಕೊಳ್ಳುವ ಮನಸ್ಸಿರುತ್ತದೆ, ಬುದ್ಧಿಮಾಂದ್ಯ ಮಕ್ಕಳನ್ನು ಒಪ್ಪಿಕೊಳ್ಳುವ ಮನಸ್ಸಿರುತ್ತದೆ, ದುಷ್ಟ ಮಕ್ಕಳನ್ನು ಒಪ್ಪಿಕೊಳ್ಳುವ ಮನಸ್ಸಿರುತ್ತದೆ. ಆದರೆ ಗಂಡಾಗಿ ಹುಟ್ಟಿ, ಹೆಣ್ಣಿನ ಮನಸ್ಸು, ಭಾವನೆ ಇರೋ ಹೆಣ್ಣೂ ಅಲ್ಲದ ಗಂಡೂ ಅಲ್ಲದ ಮಂಗಳಮುಖಿಯರನ್ನು ಯಾವ ಹೆತ್ತವರೂ, ಬಂಧುಬಾಂಧವರೂ ತಮ್ಮ ಮಕ್ಕಳೆಂದು ಒಪ್ಪಿಕೊಳ್ಳುವುದಿಲ್ಲ ಯಾಕೆ? ಅಂಥವರನ್ನು ಅವಮಾನ ಮಾಡಬೇಡಿ. ಅದು ಅವರ ತಪ್ಪಲ್ಲ. ನಾವು ಮತ್ತು ನಮ್ಮ ಸಮಾಜ ಅವರನ್ನು ಗೌರವಿಸೋಣ ಹಾಗೂ ಸ್ವಾವಲಂಬಿಗಳಾಗಿ, ಪ್ರಾಮಾಣಿಕತೆಯಿಂದ ಬದುಕಲು ಸಹಕರಿಸೋಣ.

**-ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ**

### ಸ್ಫೂರ್ತಿ ತುಂಬುವಂತಿದೆ

ಧಾರಾವಾಹಿ ಚೆನ್ನಾಗಿ ಮೂಡಿಬಂದಿತು. ವಿಶಿಷ್ಟ ಕಥೆಯ ಮೂಲಕ ಎಲ್ಲರ ಮನ ತೆರೆಸುವಂತಿದೆ. ಎಷ್ಟೋ ಮನಗಳಿಗೆ ಸ್ಫೂರ್ತಿ ತುಂಬುವಂತಿದೆ.

**-ಶ್ಯಾಮಲಾ ದೇವಿ, ಭದ್ರಾವತಿ**

### ಅವಸರದಲ್ಲಿ ಮುಗಿಸಿದಂತೆನಿತು

ಮೊದಲ ನಾಲ್ಕೈದು ಸಂಚಿಕೆಗಳು ಕಥಾಹಂದರದ ಗಟ್ಟಿತನ, ಸಹಜ ನಿರೂಪಣೆಯಿಂದ ಕುತೂಹಲ ಮೂಡಿಸಿದ್ದವು. ನಂತರದ ಸಂಚಿಕೆಗಳು ಸಿನಿಮೀಯ ತಿರುವು ಪಡೆದುಕೊಂಡು ಅವಸರದಲ್ಲಿ ಮುಗಿಸಿದ ಹಾಗೆ ಭಾಸವಾಯಿತು.

**-ಆರ್ ಟಿ. ಶರಣ್, ಕಲಬುರಗಿ**

### ಸಮಾಜಮುಖಿಗಳಾಗಲು ಪ್ರೇರಣೆ

ಕಾದಂಬರಿ ಬಹಳ ಅಪರೂಪದ ಕಥಾ ವಸ್ತುವನ್ನೊಳಗೊಂಡು ಸುಖಾಂತ್ಯಗೊಂಡದ್ದು ಖುಷಿಯಾಯಿತು. ವೀರು ಇರುವ ಸ್ಥಳ ಗೊತ್ತಾದ ಮೇಲೆ ಅವನ ಅಪ್ಪ, ದೊಡ್ಡಪ್ಪ, ಕುಟುಂಬದವರೆಲ್ಲ ಬಂದು ಅವನನ್ನು ತಬ್ಬಿಕೊಂಡು ಆನಂದಭಾಷ್ಪ ಸುರಿಸಿದ ಭಾವನಾತ್ಮಕ ಪ್ರಸಂಗ ನಿಜಕ್ಕೂ ಕಣ್ಣಂಚಲ್ಲಿ ನೀರು ತರಿಸಿತು. ಒಟ್ಟಿನಲ್ಲಿ ಮಂಗಳಮುಖಿಯರು ಸಮಾಜಮುಖಿಗಳಾಗುವ ನಿಟ್ಟಿನಲ್ಲಿ ಪ್ರೇರೇಪಿಸುವಂತಹ ಧಾರಾವಾಹಿ ಇದಾಗಿತ್ತು.

**-ಟಿ.ಎಸ್ ಪ್ರತಿಭಾ, ಚಿತ್ರದುರ್ಗ**

### ಮನಮೋಹಕ ಚಿತ್ರಣ

ಧಾರಾವಾಹಿ ಓದುಗರನ್ನು ತಮ್ಮ ಗಟ್ಟಿಕಥೆಯ ಹಂದರದಲ್ಲಿ ಕಣ್ಣ ಮುಂದೆ ನಡೆದ ಹಾಗೆ ವಿವರಿಸಿದ್ದು ಮುಂದಿನ ಸಂಚಿಕೆ ಯಾವಾಗ ಅನ್ನುವ ಕುತೂಹಲ ಹೆಚ್ಚಿಸಿತ್ತು. ವೀರು ವರ್ಷ ಆಗಿ ಬದಲಾಗಿದ್ದು ಮಂಗಳಮುಖಿಯರು ಎಂದರೆ ಮೂಗು ಮುರಿಯುವ ಜನಕ್ಕೆ ಈ ಧಾರಾವಾಹಿಯಿಂದ ಆದರೂ ಅವರಿಗೂ ಬದುಕುವ ಹಕ್ಕು ಇದೆ ಎಂದು ಲೇಖಕಿ ಮನಮುಟ್ಟುವ ಹಾಗೆ ವಿವರಿಸಿದ್ದಾರೆ. ಹಾಗೆಯೇ ಮೋಣಪ್ಪ ಅವರು ಪ್ರತಿವಾರ ಶೀರ್ಷಿಕೆಗೆ ಅನುಗುಣವಾಗಿ ತಮ್ಮ ಕಲೆಯನ್ನು ಮೋಹಕವಾಗಿ ಚಿತ್ರಿಸಿದ್ದಾರೆ.

**-ಮೇಘನಾ ರಘುನಂದನ್, ಹೂವಿನ ಹಡಗಲಿ**

### ಅಂತ್ಯ ಚಲನಚಿತ್ರದಂತೆ...

ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬಂದಿದೆ. ಅಂತ್ಯವು ಹೆಚ್ಚು ಕಡಿಮೆ ಚಲನಚಿತ್ರದಂತೆ ಇತ್ತು. ಕೊನೆಯ ನಾಲ್ಕು ಕಂತುಗಳು ಕಥೆಯನ್ನು ತ್ವರಿತವಾಗಿ ಮುಗಿಸುವ ಹಂಬಲದಲ್ಲಿದ್ದವು. ತೃತೀಯ ಲಿಂಗಿಗಳು ತಮ್ಮ ಸ್ವಯಂ ಕೆಲಸ ಮತ್ತು ಉದ್ಯೋಗದ ಸಮಯದಲ್ಲಿ ಅನುಭವಿಸುವ ಕಷ್ಟಗಳ ವಿಧವು ಒಂದೆರಿಂದ ಎರಡು ಕಂತುಗಳಿಗೆ ಸೀಮಿತವಾಗಿತ್ತು. ಇದನ್ನು ಇನ್ನಷ್ಟು ವಿವರಿಸಿದ್ದರೆ, ಜನರು ಅವರ ಕಷ್ಟಗಳನ್ನು ಅರ್ಥಮಾಡಿಕೊಳ್ಳುತ್ತಿದ್ದರು.

**-ಅಜಯ್ ಎಂ. ಬೆಂಗಳೂರು**

### ಕಣ್ಣೀರು ತರಿಸಿದ ಹೃದಯಸ್ಪರ್ಶಿ ಕಥನ

ಕಾದಂಬರಿ ಹೃದಯಸ್ಪರ್ಶಿಯಾಗಿತ್ತು. ವಿಷಯ ವಿಭಿನ್ನವಾಗಿತ್ತು. ಮಂಗಳಮುಖಿಯರ ಬಾಲ್ಯದ ಬದುಕಿನ ಅವಹೇಳನ, ಅವರ ತಂದೆತಾಯಿಯರ ಸಂಕಟ, ಸಮಾಜ ಅವರನ್ನು ನಡೆಸಿಕೊಳ್ಳುವ ರೀತಿ ಓದಿ ಕಣ್ಣಲ್ಲಿ ನೀರು ಬಂತು. ಕಥಾನಾಯಕಿ ತನ್ನ ಕಾಲ ಮೇಲೆ ತಾನು ನಿಂತುದಲ್ಲದೆ, ತನ್ನಂತಹ ಇತರರಿಗೂ ಸ್ವಾಭಿಮಾನ ಮತ್ತು ಸ್ವಾವಲಂಬಿಗಳಾಗಲು ಪ್ರೋತ್ಸಾಹಿಸಿ, ಉದ್ಯೋಗ ನೀಡಿ, ಸಮಾಜ ಸೇವೆಯಲ್ಲೂ ತೊಡಗಿಸಿಕೊಳ್ಳುವುದು ಅಭಿನಂದನೀಯ. ಮುಕ್ತಾಯ ಸೊಗಸಾಗಿದೆ.

**-ಸು. ವಿಜಯಲಕ್ಷ್ಮಿ, ಶಿವಮೊಗ್ಗ**

### ಮಂಗಳಮುಖಿಯರ ಪರಿಚಯ

ವಿಶಿಷ್ಟ ರೀತಿಯಲ್ಲಿ ಮೂಡಿ ಬಂದ ಕಥೆ ಸಮಾಜಮುಖಿಯಾಗಿ, ಮಂಗಳಮುಖಿಯರ ಪೂರ್ಣ ಪರಿಚಯ ಮಾಡಿಸಿತು.

**-ಭಾರತೀ ಗಂಗಾಧರ್ ಬೆಂಗಳೂರು**